## ಕಲಾತ್ಮಕ ಶಾಲಾ ಕಾಂಪೌಂಡ್



ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕಾಂಪೌಂಡ್ ಕಲಾತ್ಮಕ ವರ್ಲಿ ಚಿತ್ತಾರದಿಂದ ಗಮನ ಸೆಳೆಯುತ್ತಿದೆ. ಇದನ್ನು ಶಾಲಾ ಶಿಕ್ಷಕರು, ಗ್ರಾಮಸ್ಥರು, ವಿದ್ಯಾರ್ಥಿಗಳೇ ಮಾಡಿರುವುದು ವಿಶೇಷ. ರಸ್ತೆಯಲ್ಲಿ ಹೋಗುವವರು ಒಂದು ಕ್ಷಣ ನಿಂತು ನೋಡಿ ಮುಂದೆ ಸಾಗುತ್ತಾರೆ. ಈ ಕಲೆಯನ್ನು ಗೋಡೆಗಳ ಮೇಲೆ ಅರಳಿಸಿದ ನಂತರ ಯಾರೂ ಕೂಡ ಭಿತ್ತಿಪತ್ರ, ಉಗುಳು, ಗೋಡೆ ಬರಹ ಮಾಡುವುದು ನಿಂತಿದೆ. ಅದರಲ್ಲೂ ಸರ್ಕಾರಿ ಶಾಲೆಯಲ್ಲಿನ ಈ ಕ್ರಮ ಎಲ್ಲರನ್ನೂ ಬೆರಗುಗೊಳಿಸಿದೆ.

**-ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ**



## ಮನಮೋಹಕ ಪ್ರೇಮ ಮಂದಿರ

ಉತ್ತರ ಪ್ರದೇಶದ ಮಥುರಾದ ಸಮೀಪದ ಬೃಂದಾವನದಲ್ಲಿರುವ ಪ್ರೇಮ ಮಂದಿರದ ಚಿತ್ರವಿದು. ಅದ್ಭುತ ವಿನ್ಯಾಸದಲ್ಲಿರುವ ಈ ಪ್ರೇಮ ಮಂದಿರ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ನೂರಾರು ಎಕರೆ ವಿಸ್ತಾರವಿರುವ ಈ ಜಾಗದಲ್ಲಿ ಸುಂದರ ಹೂತೋಟದ ನಡುವೆ ಬಾಲಕೃಷ್ಣನ ತುಂಟಾಟ, ರಾಧೆಯೊಂದಿಗೆ ರಾಸಲೀಲೆ ಮೊದಲಾದ ದೃಶ್ಯಗಳನ್ನು ಇಲ್ಲಿ ಮೂಡಿಸಿದ್ದಾರೆ. ಸಾಯಂಕಾಲ ಐದು ಗಂಟೆಯಿಂದಲೇ ಇಲ್ಲಿ ಜಮಾಯಿಸುವ ಪ್ರವಾಸಿಗರು ರಾತ್ರಿ ಹತ್ತು ಗಂಟೆಯಾದರೂ ಕದಲುವುದಿಲ್ಲ! ಕತ್ತಲು ಕವಿಯುತ್ತಿದ್ದಂತೆ ಸುಮಾರು ಏಳು ಗಂಟೆಗೆ ವರ್ಣನೆಗೆ ನಿಲುಕದ ದೃಶ್ಯಗಳು ಸಾಕಾರಗೊಳ್ಳುತ್ತವೆ. ರಾಧಾ –ಮಾಧವರ ಕೋಲಾಟ, ಕಾಳಿಂಗ ಮರ್ಧನ ಗಿರಿಧರ ಕೃಷ್ಣ.... ಎಲ್ಲಾ ದೃಶ್ಯಗಳಿಗೂ ಜೀವ ಬಂದು ಬಣ್ಣ ಬಣ್ಣದ ಬೆಳಕಲ್ಲಿ ನಮ್ಮನ್ನು ಕಲ್ಪನಾ ಲೋಕದಲ್ಲಿ ಓಲಾಡಿಸುತ್ತವೆ. ಮುಖ್ಯ ಆಕರ್ಷಣೆಯಾದ ಪ್ರೇಮ ಮಂದಿರವಂತೂ ನೂರಾರು ವರ್ಣಗಳೊಂದಿಗೆ ಮಾಯಾಲೋಕವನ್ನೇ ನಮ್ಮ ಮುಂದೆ ತೆರೆದಿಡುತ್ತದೆ.

**-ಜಯಾ ಯಾಜಿ, ಶಿರಾಲಿ**

## ಕೋಲಾರಮ್ಮ ದೇಗುಲ



ಕೋಲಾರದಲ್ಲಿರುವ ಕೋಲಾರಮ್ಮನ ದೇವಾಲಯವನ್ನು ಸಾವಿರ ವರ್ಷಗಳ ಹಿಂದೆ ಚೋಳರಾಜರು ನಿರ್ಮಾಣ ಮಾಡಿದ್ದರಂತೆ. ಈ ಕೋಲಾರಮ್ಮ ಪಾರ್ವತಿ ದೇವಿಯ ರೂಪವೆಂದು ಜನರು ಪೂಜಿಸುತ್ತಾರೆ. ಮೈಸೂರು ಮಹಾರಾಜರು ಇಲ್ಲಿಗೆ ಬಂದು ದೇವಿಯ ದರ್ಶನ ಮಾಡುತ್ತಿದ್ದರಂತೆ. ಇಲ್ಲಿರುವ ವಿಗ್ರಹಗಳನ್ನು ಮಾರ್ಬಲ್ ಕಲ್ಲಿನಲ್ಲಿ ಕೆತ್ತಲಾಗಿದೆ.

ಕೋಲಾರಮ್ಮ ದೇವಿಯನ್ನು ಭಕ್ತರು ತದೇಕ ದೃಷ್ಟಿಯಿಂದ ನೋಡಬಾರದೆಂದು ಗರ್ಭಗುಡಿಯ ಒಳಗೆ ಎಡಭಾಗದಲ್ಲಿ ದೊಡ್ಡ ಕನ್ನಡಿಯನ್ನು ಇಡಲಾಗಿದೆ. ಬಲಭಾಗದಲ್ಲಿ ದೇವಿಯು ಅಲಂಕೃತಳಾಗಿ ಕುಳಿತಿದ್ದಾಳೆ. ಭಕ್ತರು ದೇವಿಯನ್ನು ಮೊದಲು ಕನ್ನಡಿಯಲ್ಲಿ ನೋಡಿ, ಬಲಕ್ಕೆ ಬಂದು ದೇವಿಯ ದರ್ಶನ ಮಾಡಬೇಕೆಂಬ ವಿಶಿಷ್ಟ ನಿಯಮ ಇಲ್ಲಿದೆ. ಇಲ್ಲಿರುವ ಮತ್ತೊಂದು ವಿಗ್ರಹವೆಂದರೆ ಚೆಲ್ಲಮ್ಮ ಅಥವಾ ಚೇಳು. ಇದು ದೇವಿಯ ವಾಹನವಂತೆ. ಚೇಳು ಕಚ್ಚಬಾರದೆಂದು ಭಕ್ತರು ಇದನ್ನೂ ಪೂಜಿಸುತ್ತಾರೆ. ಗರ್ಭಗುಡಿಯ ಎದುರುಗಿರುವ ವಿಗ್ರಹಗಳು ದೇವಿಯ ಸಹೋದರಿಯರಂತೆ.

**-ಟಿ.ಆರ್. ಲಲಿತರಾವ್, ಬೆಂಗಳೂರು**